# MYSORE LEGISLATIVE ASSEMBLY.

FORTY-SEVENTH DAY.

*Wednesday, 5th August 1953.*

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. SIDDAIYA, B.A., LL.B.) in the Chair.

## QUESTIONS AND ANSWERS

### Conferences for uplift of Harijans

Q.-179. Sri C.T. HANUMANTHAIYA (Pavagada—Scheduled Castes).—

Will the Government be pleased to state):—

(*a*) the taluk in which conferences were held from 1951 to 1952 in the State in connection with the upliftment of Harijans;

(*b*) the number of resolutions passed unanimously in the conferences; (the number of them in respect of which action has been taken);

(*c*) in how many conferences request has been made for starting agricultural colonies and the number of agricultural colonies that have been sanctioned?

*A*.—Sri Kadidal MANJAPPA (Minister for Revenue and Public Works) [On behalf of Sri K. Hanumanthaiya (Chief Minister)].—

(*a*) No conference was arranged by Government.

(*b*) and (*c*) Do not arise in view of reply to (*a*).

ಶ್ರೀ ಸಿ. ಟಿ. ಹನುಮಂತಯ್ಯ.—ಹರಿಜನರ ಅಭಿವೃದ್ಧಿಗೆ ಖಾನಗೀ ಜನರು ಅಲ್ಲಲ್ಲಿ ಸಂಸ್ಥಾನಾಮಳಿ ಸಮ್ಮೇಳನ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ ಹರಿಜನರು ಸಮ್ಮೇಳನ ನಡೆಸಿರುತ್ತಾರೆ.

ಶ್ರೀ ಸಿ. ಟಿ. ಹನುಮಂತಯ್ಯ.—ಆ ರೀತಿ ತಿಪಟೂರು ತಾಲ್ಲೂಕಿನಲ್ಲಿ ಹರಿಜನರು ಸಮ್ಮೇಳನ ನಡೆಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಆ ಸಮ್ಮೇಳನದಲ್ಲಿ ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿರುವುದು ನಿಜವೇ?

ಶ್ರೀ ಕಡಿದಾಳ್ ಮಂಜಪ್ಪ.—ಯಾವಯಾವ ನಿರ್ಣಯ ಬಂದಿದೆಯೆಂಬುದನ್ನು ನಿರ್ದಿಷ್ಟವಾಗಿ ಹೇಳಲಾರೆ.

ಶ್ರೀ ಸಿ. ಟಿ. ಹನುಮಂತಯ್ಯ.—ಸಾರ್ವಜನಿಕರು ಈ ರೀತಿ ಸಮ್ಮೇಳನಗಳನ್ನು ಮಾಡಿ ಅಲ್ಲಿ ಅಂಗೀಕೃತವಾದ ನಿರ್ಣಯಗಳನ್ನು ಸರ್ಕಾರಕ್ಕೆ ಕಳುಹಿಸಿದರೆ ಅವುಗಳನ್ನು ಗಮನಕ್ಕೆ ತೆಗೆದುತೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಸೂಕ್ತವೆಂದು ಕಂಡು ಬಂದ ನಿರ್ಣಯಗಳ ಬಗ್ಗೆ ತಕ್ಕ ಗಮನ ಕೊಡುತ್ತೇವೆ.

ಶ್ರೀ ಸಿ. ಟಿ. ಹನುಮಂತಯ್ಯ.—ಸಾರ್ವಜನಿಕ ಸಮ್ಮೇಳನ ನಡೆಸಿ ಅಲ್ಲಿ ಹರಿಜನರಿಗೆ ಅತ್ಯವಶ್ಯಕವಾದ ಸೌಕರ್ಯ ಮತ್ತು ಸೌಲಭ್ಯಗಳ ಬಗ್ಗೆ ಸಹಾಯ ಕೋರಿ ಸರ್ಕಾರಕ್ಕೆ ಕಳುಹಿಸಿದ್ದರೆ ಆ ಬಗ್ಗೆ ಸೂಕ್ತ ಗಮನ ಕೊಡಲಾಗುತ್ತದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಕೋರಿಕೆ ನ್ಯಾಯಸಮ್ಮತವಾದುದೆಂದು ಕಂಡುಬಂದರೆ ಆ ಬಗ್ಗೆ ನಿರ್ಣಯಗಳೇನಾದರೂ ಬಂದಿದ್ದರೆ ಅವುಗಳನ್ನು ಸರ್ಕಾರದವರು ಪರಿಶೀಲಿಸುತ್ತಾರೆ.

ಶ್ರೀ ಪಿ. ಆರ್. ರಾಮಯ್ಯ.—ಹರಿಜನ ಸಮ್ಮೇಳನ ನಡೆಯುತಕ್ಕ ಸಮಯದಲ್ಲಿ ಅಲ್ಲಿನ ಸ್ಥಳೀಯ ಅಧಿಕಾರಿಗಳೂ ಹಾಜರಿರುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಇದ್ದೇ ಇರಬೇಕೆಂಬ ನಿಯಮವಿಲ್ಲ. ಅವರು ಹಾಜರಿರುವುದು ಅಥವಾ ಇಲ್ಲದಿರುವುದು ಆಯಾ ಸಂದರ್ಭವನ್ನು ಅವಲಂಬಿಸಿರುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಸಮ್ಮೇಳನ ನಡೆಯುತಕ್ಕ ಕಾಲದಲ್ಲಿ ಹಾಜರಿದ್ದು ಸರ್ಕಾರದ ಗಮನಕ್ಕೆ ತರುವ ವಿಚಾರದ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ಅವರಿಗೇನಾದರೂ ತಿಳಿವಳಿಕೆ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಗಮನಕ್ಕೆ ಬರಬೇಕಾದಂಥ ಪ್ರಾಮುಖ್ಯ ವಿಚಾರಗಳಿದ್ದರೆ ಅವುಗಳನ್ನು ಅವರು ಗಮನಕ್ಕೆ ತರುತ್ತಾರೆ.

ಶ್ರೀ ಪಿ. ಆರ್. ರಾಮಯ್ಯ.—ವಿದ್ಯಾಭ್ಯಾಸದ ವಿಚಾರದಲ್ಲಿಹರಿಜನರಿಗೆ ಕೊಡಬೇಕಾಗಿರುವ ಪ್ರೋತ್ಸಾಹದ ಸಂಬಂಧವಾಗಿ ಸಮ್ಮೇಳನಗಳಲ್ಲಿ ನಿರ್ಣಯಗಳಾಗಿ ಅವುಗಳು ಸರ್ಕಾರದ ಗಮನಕ್ಕೆ ಬಂದಿವೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನರ್ಕಾರದ ಗಮನಕ್ಕೆ ಕೆಲವು ಬಂದಿವೆ.

ಶ್ರೀ ಪಿ. ಆರ್. ರಾಮಯ್ಯ.—ಬೆಂಗಳೂರಿನಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಹಾಸ್ಟಲಿನ ಸೌಕರ್ಯವಿಲ್ಲದೆ ಇರುವ ವಿಚಾರದಲ್ಲಿ ಹರಿಜನರು ಅರ್ಜಿಗಳ ಮೂಲಕ ಆ ಸೌಕರ್ಯಕಲ್ಪಿಸಿಕೊಡಬೇಕೆಂಬ ಬಗ್ಗೆ ಮನವಿ ನಲ್ಲಿ ಸಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಜಿಗಳ ಮೂಲಕ ಬಂದಿರುವುದು ಗೊತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈ ಕೊರತೆಯಿಂದ ಹರಿಜನ ವಿದ್ಯಾರ್ಥಿಗಳು ಬಹಳ ಕಷ್ಟಪಡುತ್ತಿದ್ದಾರೆಂಬುದು ನರ್ಕಾರದ ಗಮನಕ್ಕೆ ಯಾವ ರೀತಿಯಾದರೂ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಿಸಿ ಹೇಳುತ್ತೇನೆ. ನಿರ್ದಿಷ್ಟವಾಗಿ ಹೇಳಲಾರೆ.

ಶ್ರೀ ಪಿ. ಆರ್. ರಾಮಯ್ಯ.—ಈ ಬಗ್ಗೆ ಅವರಿಗಿರುವ ಕುಂದುಕೊರತೆಗಳ ನಿವಾರಣೆಗೆ ನಲಹೆಗಳನ್ನಿತ್ತರೆ ಅವುಗಳನ್ನು ಕಾರ್ಯಗತ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ನಮ್ಮೋಳನದಲ್ಲಿ ಹರಿಜನರಿಗೆ ವಾನದ ಮನೆಗಳಿಗೆ ಜಾಗವಿಲ್ಲದ್ದರಿಂದ ಅದಕ್ಕಾಗಿ ತಕ್ಕ ವಿರ್ವಾದು ಮಾಡಬೇಕೆಂಬ ಬಗ್ಗೆ ನಿರ್ಣಯ ಮಾಡಿ ನರ್ಕಾರಕ್ಕೆ ಕಳುಹಿಸಿದ್ದರೂ ಇದುವರೆಗೆ ಉತ್ತರ ಬಾರದಿರುವುದು ನರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ದಿಷ್ಟವಾದ ನಿದರ್ಶನಗಳಿದ್ದರೆ ಅವುಗಳಿಗೆ ನೂಕ್ತ ಗಮನ ಕೊಡುತ್ತಾರೆ.

---

## Applications for Darkhast in S. No. 34 of Gowdigere Village, Malavalli Taluk.

*Q.*—229. **Sri M. CHIKKALINGIAH** (Malavalli—Scheduled Castes).—

Will the Government be pleased to state :—

(*a*) the extent of land available for cultivation at present in survey No. 34 of Gowdigere Village, Malavalli Taluk, under correspondence for Darkhast after survey;

(*b*) the number of applications received so far from the people for the same (communitywar information may kindly be furnished);

(*c*) the stage of this Darkhast records at present ?

*A.*—**Kadidal MANJAPPA** (Minister for Revenue and Public Works).—

(*a*) 35 acres 30 guntas.

(*b*) 84 applications. Community-war information is not available.

(*c*) The matter is under consideration.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಬಗ್ಗೆ ದರಖಾಸ್ತ್ ರಿಕಾರ್ಡ್ ನರ್ಕಾರದ ಆಧೀನದಲ್ಲಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈ ಬಗ್ಗೆ ವರದಿಯನ್ನು ಡೆಪ್ಯುಟಿ ಕಮಿಷನರು ನರ್ಕಾರಕ್ಕೆ ಕಳುಹಿಸುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇದಕ್ಕೆ ನಂಬಂಧಿಸಿದಹಾಗೆ 80 ಅರ್ಜಿಗಳು ಬಂದಿವೆಯೆಂದು ತಿಳಿಸಿದ್ದೀರಿ. ಆ ಪೈಕಿ ಹರಿಜನರಿಂದ ಬಂದಿರುವ ಅರ್ಜಿಗಳೆಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದಕ್ಕೆ political sufferers ನಹ ಅರ್ಜಿಗಳನ್ನು ಹಾಕಿರುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು political sufferersನಿಂದ ಅರ್ಜಿಗಳು ಬಂದಿವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರ ಹೆನರುಗಳನ್ನು ತಿಳಿನಲು ನಾಧ್ಯವೇ?

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ಎಂ.ವಿ. ನಾರಾಯಣ, ಶ್ರೀಮುದ್ದುರಾಯಶೆಟ್ಟಿ, ಶ್ರೀ ರಾಜಶೇಖರಪ್ಪ ಮತ್ತು ಶ್ರೀ ಲಿಂಗಯ್ಯ ಎಂಬುವರು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ದರಖಾಸ್ತ್ ರಿಕಾರ್ಡ್ originate ಆದುದು ಯಾವಾಗ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ತಿಳಿದು ಬಂದಿರುವ ಪ್ರಕಾರ 1948ರಲ್ಲಿ ಪ್ರಾರಂಭವಾಗಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ರಿಕಾರ್ಡು 1946ರಲ್ಲಿ ಹರಿಜನರ ಅಪ್ಲಿಕೇಷ್ಟ ಮೇಲೆಯೇ ಬಿಲ್ಡ್ ಆಪ್ ಆದದ್ದು ಎಂಬುದನ್ನು ಒಪ್ಪಿಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹರಿಜನರ ಅಪ್ಲಿಕೇಷ್ಟ ಮೇಲೆ ಅಲ್ಲ; ಹರಿಜನರ ಕಾಲೋನಿಗೆ ನಂಬಂಧಪಟ್ಟಂತೆ ಬಿಲ್ಡ್ ಆಪ್ ಆಗಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹರಿಜನರು ಅಪ್ಲಿಕೇಷ್ಟ ಕೊಟ್ಟಮೇಲೆ ಮೆಮೋರ್ಯಾಂಡಂ ಫಾರಂ ಫಿಲ್ ಅಪ್ ಆಗಿ ನರ್ವೇ ಮಾಡಿದ ಮೇಲೆ ಕೊಡಲಾಗುತ್ತದೆ ಎಂದು ಎಂಡಾರ್ಸ್‌ಮೆಂಟ್ ಕೊಟ್ಟಿರುವುದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪ.—ಎಂಡಾರ್ಸ್‌ಮೆಂಟ್ ಕೊಟ್ಟಿರುವುದು ನನಗೆ ಗೊತ್ತಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಜಮೀನಿಲ್ಲದ ಹರಿಜನರು ಜಮೀನು ಕೊಡಬೇಕೆಂದು ಅರ್ಜಿ ಹಾಕಿಕೊಂಡಿದ್ದರೂ ಕೂಡ ಪೊಲಿಟಿಕಲ್ ನಫರರ್ಸ್‌ಗೂ ಇಷ್ಟಿಷ್ಟು ಎಕರೆ ಕೊಡಬಹುದೆಂದು ಗವರ್ನಮೆಂಟ್ ಆರ್ಡರ್ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹರಿಜನರ ಅರ್ಜಿ ವಿಚಾರ ಗೊತ್ತಿಲ್ಲ, ರಾಜಕೀಯದಲ್ಲಿ ನೊಂದವರು ಕೆಲವರು ಅರ್ಜಿ ಕೊಟ್ಟಿದ್ದರು, ಆ ಅರ್ಜಿ ಮೇಲೆ ಜಮೀನು ಇದ್ದರೆ ಅವರಿಗೂ ಇಷ್ಟು ಎಕರೆ ಕೊಡಬಹುದು ಎಂದು ನ್ಯಾಂಕ್ಷ ಮಾಡಿದ್ದೇವೆಯೇ ಹೊರತು ಆಖೈರು ತೀರ್ಮಾನವಾಗಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಮಾಡಿದ ಆರ್ಡರ್ ಮೇಲೆ ಲೋಕಲ್ ಅಥಾರಟೀನುಗಳು ನಾಗುವಳಿ ಚೀಟಿ ಕೊಡಬೇಕೆಂದು ಒತ್ತಾಯಪಡಿಸಿದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಯಾರೂ ಒತ್ತಾಯಪಡಿಸಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ವಿಷಯದಲ್ಲಿ ತಮಗೂ, ಚೀಫ್ ಮಿನಿಸ್ಟರವರಿಗೂ ನಾನು ಒಂದು ಡಿ. ಓ. ಲೆಟರ್ ಬರೆದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಡಿ. ಓ. ಲೆಟರ್ ಬರೆದಿದ್ದೀರಿ.